ಕೊನೆಗೊಂದು ದಿನ ಒಂದು ದೊಡ್ಡ ಸಮಾರಂಭವನ್ನು ಆಯೋಜಿಸಲಾಯಿತು. ಇದರಲ್ಲಿ ನಗರದ ಶ್ರೀಮಂತರು, ಹಿರಿಯ ವೈದ್ಯರು ಭಾಗವಹಿಸಿದ್ದರು. ಆರೋಗ್ಯ ಸಚಿವರು ಅಧ್ಯಕ್ಷತೆ ವಹಿಸಿದ್ದರು. ನಾನು ಬಹಳ ಮುತುರ್ವಜಿ ವಹಿಸಿ ಸೇವೆ ಸಲ್ಲಿಸಿದ್ದರಿಂದ ನನ್ನನ್ನು ಅಧ್ಯಕ್ಷರ ಪಕ್ಕ ಕೂರಿಸಲಾಯಿತು. ಏಕೆಂದರೆ ನನ್ನ ಸನ್ಮಾನಕ್ಕಾಗಿಯೇ ಈ ಸಮಾರಂಭವನ್ನು ಆಯೋಜಿಸಿದ್ದು. ಹಾರಗಳ ಭಾರದಿಂದ ನನ್ನ ಕತ್ತು ಸಂಪೂರ್ಣವಾಗಿ ಬಗ್ಗಿ ಹೋಗಿದ್ದರೆ, ಸೋಲಿನ ಭಾವದಿಂದ ನನ್ನ ವ್ಯಕ್ತಿತ್ವ ತೀರಾ ವಿನಯಶೀಲವಾಗಿತ್ತು. ಆದರೆ ನಾನು ಅಹಂಕಾರದಿಂದ ಅತ್ತ ಇತ್ತ ನೋಡುತ್ತಿದ್ದೆ. ಈ ಅಲ್ಪಮಾನವನ ಅಳಿಲು ಸೇವೆ ಕುರಿತು ಧನ್ಯತೆಯ ಭಾವದಲ್ಲಿ ಮಿಂದು ಕಮಿಟಿಯು ಒಂದು ಸಾವಿರದ ನೂರ ಒಂದು ರೂಪಾಯಿಯ ಬಹುದೊಡ್ಡ ಮೊತ್ತದ ಚೀಲವನ್ನು ನನಗೆ ಕಾಣಿಕೆಯಾಗಿ ನೀಡಿತು.

ಅಲ್ಲಿ ನೆರೆದಿದ್ದ ಜನ ನನ್ನ ಕಾರ್ಯದಕ್ಷತೆಯನ್ನು, ಮುಖ್ಯವಾಗಿ ನನ್ನ ಸಹನೆಯನ್ನು ಶ್ಲಾಘಿಸಿದರು.

ಕಷ್ಟಕಾಲದಲ್ಲಿ ಪ್ರಾಣದ ಹಂಗು ತೊರೆದು ಎಷ್ಟೆಲ್ಲಾ ಪ್ರಾಣಗಳನ್ನು ಉಳಿಸಿದ್ದಾರೆ. ಅದಕ್ಕೆ ಯಾವುದೂ ಸಾಟಿ ಇಲ್ಲ. ಹಗಲು ರಾತ್ರಿ ಎನ್ನದೆ ತಮ್ಮ ಜೀವನವನ್ನು ಮಾನವತೆಗಾಗಿ ಮುಡಿಪಾಗಿಟ್ಟಿದ್ದಾರೆ. ಜನಸೇವೆಯನ್ನು ದೇವರ ಸೇವೆ ಎಂದು ಭಾವಿಸಿ ರೋಗಿಗಳ ಮನೆಗಳಿಗೆ ಹೋಗಿ, ಸಾಯುತ್ತಿದ್ದ ರೋಗಿಗಳಿಗೆ ಸಂಜೀವಿನಿಯನ್ನು ನೀಡಿ ಬದುಕಿಸಿದ್ದಾರೆ ಇತ್ಯಾದಿ.

ಆರೋಗ್ಯಮಂತ್ರಿಗಳು ಮೇಜಿನ ಬಲಗಡೆ ನಿಂತು ಸಭಿಕರ ಗಮನವನ್ನು ಸೆಳೆದು, ತಮ್ಮ ಕೈಯಲ್ಲಿದ್ದ ಪುಟ್ಟ ಕೋಲಿನಿಂದ ಗೋಡೆಯ ಮೇಲಿದ್ದ ನಕ್ಷೆಯ ಕಪ್ಪು ಗೆರೆಯನ್ನು ತೋರಿಸಿ ಕಾಯಿಲೆಯ ದಿನಗಳಲ್ಲಿ ದಿನೇದಿನೇ ಹೇಗೆ ಆರೋಗ್ಯ ಕ್ಷೀಣಿಸುತ್ತಿತ್ತು, ಕಾಯಿಲೆ ಹೇಗೆ ಉಲ್ಬಣಗೊಳ್ಳುತ್ತಿತ್ತು, ಮತ್ತು ಕೊನೆಗೆ ನನ್ನ ಶುಶ್ರೂಷೆಯಿಂದ ಆರೋಗ್ಯವಂತರಾದ 54 ರೋಗಿಗಳನ್ನು ಉಲ್ಲೇಖಿಸಿ, ಉತ್ತರ ಶೇಕಡ ನೂರಕ್ಕೆ ನೂರು ಎಂದು ಹೇಳಿ, ಇದರಿಂದ ಕಪ್ಪುಗೆರೆ ಸಂಪೂರ್ಣವಾಗಿ ಹೇಗೆ ನೆಲಕಚ್ಚಿತು ಎಂದು ನನ್ನನ್ನು ಕೊಂಡಾಡಿದರು...

ಇದಾದ ನಂತರ, ಆರೋಗ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ನನ್ನ ಧೈರ್ಯವನ್ನು ಮೆಚ್ಚಿ, 'ನಿಮಗೆಲ್ಲರಿಗೂ ಒಂದು ವಿಷಯ ತಿಳಿದು ಬಹಳ ಸಂತೋಷವಾಗಬಹುದು. ಅದೇನೆಂದರೆ, ಡಾ. ಭಕ್ಷಿ ಅವರು ಮಾಡಿರುವ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ, ಅವರನ್ನು ಲೆಫ್ಟಿನೆಂಟ್ ಕರ್ನಲ್ ಆಗಿ ನೇಮಿಸಲಾಗುತ್ತಿದೆ' ಎಂದು ಘೋಷಿಸಿದರು.

ಸಭಾಂಗಣ ಜನರ ಜಯಕಾರಗಳಿಂದ ಮತ್ತು ಚಪ್ಪಾಳೆಗಳಿಂದ ಪ್ರತಿಧ್ವನಿಸಿತು.

ಆ ಚಪ್ಪಾಳೆಯ ಸದ್ದುಗಳ ನಡುವೆ, ನಾನು ಅಹಂಕಾರದಿಂದ ನನ್ನ ಕುತ್ತಿಗೆಯನ್ನು ಮೇಲಕ್ಕೆತ್ತಿ ಸಮಾರಂಭದ ಅಧ್ಯಕ್ಷರನ್ನು ಹೊಗಳಿ, ನೆರೆದಿದ್ದ ಜನರಿಗೆ ಧನ್ಯವಾದಗಳನ್ನು ಹೇಳಿ, ನನ್ನ ಸುದೀರ್ಘವಾದ ಭಾಷಣವನ್ನು ಪ್ರಾರಂಭಿಸಿದೆ. ಬೇರೆ ವಿಷಯಗಳನ್ನು ಪ್ರಸ್ತಾಪಿಸುತ್ತಾ, ನಾನು ಡಾಕ್ಟರುಗಳ ದಯೆಯ ಬಗ್ಗೆ, ಯೋಗ್ಯ ಆಸ್ಪತ್ರೆಗಳ ಬಗ್ಗೆ ಮಾತಾಡಿದೆ. 'ಆ ಕ್ವಾರಂಟೈನ್‌ಗಳ ಮಹತ್ವ ಜನರಿಗೆ ಗೊತ್ತಾಗಲಿಲ್ಲ, ಅದರ ಪ್ರಾಮುಖ್ಯತೆಯೇನೆಂಬುದು ಜನರಿಗೆ ಗೊತ್ತಿಲ್ಲ. ಅವು ಬಡವರ ಮನೆಗಳೂ ಹೌದು. ಜನ ಸಂಪೂರ್ಣವಾಗಿ ಅದರ ಪ್ರಯೋಜನ ಪಡೆಯಲಿಲ್ಲ... ಆದ್ದರಿಂದ ಅವರು ಈ ಭಯಂಕರ ರೋಗಕ್ಕೆ ಬಲಿಯಾದರು. ನಾನು ಮತ್ತು ನನ್ನ ಸಹೋದ್ಯೋಗಿಗಳು ಈ ಕಾಯಿಲೆಯ ಬಗ್ಗೆ ಆಳವಾದ ಅಧ್ಯಯನ ಮಾಡಿ, ಔಷಧಿ ಕಂಡು ಹಿಡಿದು ಈ ರೋಗವನ್ನು ಬುಡದಿಂದ ಕಿತ್ತೆಸೆಯಲು ಪ್ರಾಣವನ್ನು ಪಣವಾಗಿಟ್ಟು ಹೋರಾಡಿದೆವು. ಕ್ವಾರಂಟೈನ್ ಮತ್ತು ಆಸ್ಪತ್ರೆಗಳಿಂದ ಬಿಡುವಾದಾಗ ನಾವು ನಮ್ಮ ರಾತ್ರಿಗಳನ್ನು ಕೊಳಚೆ ಪ್ರದೇಶಗಳಲ್ಲಿ ಕಳೆದೆವು' ಎಂದು ಹೇಳಿದೆ.

ಇದಾದ ನಂತರ, ನಾನು ಲೆಫ್ಟಿನೆಂಟ್ ಕರ್ನಲ್ ಆಗಿ, ನನ್ನ ಕುತ್ತಿಗೆಯನ್ನು ಎತ್ತಿ, ಹಾರಗಳಿಂದ ಭಾರವಾಗಿದ್ದ ಭುಜವನ್ನು ಹಗುರಗೊಳಿಸಿ, ಜನರ ಅಲ್ಪಕಾಣಿಕೆಯಾದ ಸಾವಿರ ರೂಪಾಯಿಯನ್ನು